**ಓ.ಎಸ್ .ನಂ. 91/2022** **ಪಿ.ಡಬ್ಲ್ಯೂ- 1**

**<u>ಸಾಕ್ಷಿಯನ್ನು ದಿನಾಂಕ 15.9.2023 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

<u>ಮುಖ್ಯ ವಿಚಾರಣೆಃ ವಾದಿ ಪರ ವಕೀಲರಿಂದಃ</u>

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಅದರಲ್ಲಿರುವ ಅಂಶಗಳು ಸತ್ಯವಾಗಿದ್ದು, ಅದರಲ್ಲಿರುವ ಸಹಿ ನನ್ನದೆ ಆಗಿರುತ್ತದೆ. ನಾನು ಹಲವು ದಾಖಲೆಗಳನ್ನು ಸಲ್ಲಿಸಿದ್ದು ಈಗ ಅವುಗಳನ್ನು ನೋಡಿ ಗುರುತಿಸುತಿದ್ದೇನೆ. ದಿನಾಂಕ 18.5.2016 ರಂದು ಪ್ರತಿವಾದಿಯರು ಸಾಲಕ್ಕಾಗಿ ನೀಡಿರುವ ಅರ್ಜಿಯನ್ನು ನಿಪಿ1 ಎಂದು, ದಿನಾಂಕ 18.5.2016 ರ ಸಾಂಕ್ಷನ್ ಮೆಮೊರೆಂಡಮನ್ನು ನಿಪಿ2 ಎಂದು, ದಿನಾಂಕ 18.5.2016 ರ ಹೈಪೋಥಿಕೇಶನ್ ಅಗ್ರಿಮೆಂಟನ್ನು ನಿಪಿ3 ಎಂದು, ದಿನಾಂಕ 13.5.2016 ರ ನೊಂದಾಯಿತ ಆಧಾರಪತ್ರವನ್ನು ನಿಪಿ4 ಎಂದು, ಡ್ರಾಫ್ಟ್ ಲೆಟರ್ ಆಫ್ ಅಂಡರ್‌ಟೇಕಿಂಗ್ ಅನೆಕ್ಸರ್-1 ಮತ್ತು ಅನೆಕ್ಸರ್-2 ನ್ನು ಹಾಜರುಪಡಿಸಿದ್ದು ಅದರಲ್ಲಿರುವ 1 ನೇ ಪ್ರತಿವಾದಿಯ ಸಹಿಯನ್ನು ಗುರುತಿಸುವ ಬಗ್ಗೆ 1 ನೇ ಪ್ರತಿವಾದಿ ಪರ ವಕೀಲರು ತಕರಾರು ಮಾಡಿದ್ದು, ಸದರಿ ದಾಖಲೆಯನ್ನು ರುಜುವಾತುಪಡಿಸುವ ಷರತ್ತಿನೊಂದಿಗೆ ಅವುಗಳನ್ನು ನಿಪಿ5 ಮತ್ತು ನಿಪಿ6 ಎಂದು, ದಿನಾಂಕ 12.5.2022 ರಂದು ಪ್ರತಿವಾದಿಯರಿಗೆ ವಕೀಲರ ಮೂಲಕ ನೀಡಿದ ನೋಟಿಸಿನ ಕಛೇರಿ ಪ್ರತಿಯನ್ನು ನಿಪಿ7 ಎಂದು, ಎರಡು ಅಂಚೆ ರಶೀದಿಯನ್ನು ನಿಪಿ8 ಮತ್ತು ನಿಪಿ9 ಎಂದು, ದಿನಾಂಕ 27.4.2016 ರಂದು ಉಳಿದ ಪ್ರತಿವಾದಿಗಳು 1 ನೇ ಪ್ರತಿವಾದಿಗೆ ಬರೆದುಕೊಟ್ಟಿರುವ ಸಾಮಾನ್ಯ ಅಧಿಕಾರ ಪತ್ರವನ್ನು ನಿಪಿ10 ಎಂದು, ದಿನಾಂಕ 18.5.2016 ರಂದು 1 ನೇ ಪ್ರತಿವಾದಿ ಸಾಲಕ್ಕಾಗಿ ನೀಡಿರುವ ಇನ್ನೊಂದು ಆರ್ಜಿಯನ್ನು ನಿಪಿ11 ಎಂದು, ಸಾಂಕ್ಷನ್ ಮೆಮೋರಂಡಮನ್ನು ನಿಪಿ12 ಎಂದು, ಲೋನ್ ಅಗ್ರಿಮೆಂಟನ್ನು ನಿಪಿ13 ಎಂದು, ದಿನಾಂಕ 13.5.2016 ರ ಆಧಾರಪತ್ರವನ್ನು ನಿಪಿ14 ಎಂದು ಗುರುತಿಸಲಾಯಿತು.

ಮಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.